1

# ಕುಮಾರನು ತಂದೆಯ ಜ್ಞಾನದಂತೆ

ಕುಮಾರನ ಜ್ಞಾನವನ್ನು ಸಂಪೂರ್ಣವಾಗಿ ಮೆಚ್ಚಿಕೊಳ್ಳಲು, ಮೊದಲು ನಾವು ತಂದೆಯ ಜ್ಞಾನದಂತೆ ಆತನನ್ನು ನೋಡತಕ್ಕದ್ದು. ತಂದೆಯ ಜ್ಞಾನವು ಮೊದಲು ನಮಗೆ ಸೃಷ್ಟಿಕಾರ್ಯದಲ್ಲಿ ಪ್ರದರ್ಶಿಸಲ್ಪಟ್ಟಿತು. ವಿಶ್ವವನ್ನು, ನಮ್ಮ ಜಗತ್ತನ್ನು ಹಾಗೂ ಸಮಯವನ್ನು ಅಸ್ತಿತ್ವಕ್ಕೆ ತಂದ ದೇವರ ಪ್ರತ್ಯಕ್ಷಪಡಿಸುವಿಕೆಯಾದ, ಕುಮಾರನಾದ ದೇವರು ಅನಂತತ್ವದೊಳಗಿಂದ ಬಂದನು.

## ಹೊಸ ಒಡಂಬಡಿಕೆಯಲ್ಲಿ ಬೋಧಿಸಲ್ಪಟ್ಟಂತೆ

"ಮೊದಲು" ದೇವರು ಏನನ್ನು ಪ್ರಕಟಿಸಿದನು ಎಂಬದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು "ಕೊನೆಯದಾಗಿ" ದೇವರು ಏನನ್ನು ಪ್ರಕಟಿಸಿದನು ಎಂಬುದನ್ನು ಪರೀಕ್ಷಿಸುವದರಿಂದ ಪ್ರಾರಂಭಕ್ಕಿಂತ ಮೊದಲು ಏನಾಗಿತ್ತು ಎಂಬುದಕ್ಕೆ ನಾವು ತಲುಪೋಣ. ಸೃಷ್ಟಿಗಿಂತ ಮೊದಲು ದೇವರ ಜ್ಞಾನದಂತೆ ಯೇಸುವಿನ ಬಗ್ಗೆ ಹೊಸ ಒಡಂಬಡಿಕೆಯ ದೃಷ್ಟಿಕೋನವನ್ನು ಪರೀಕ್ಷಿಸುವದರಿಂದ ಇದನ್ನು ಮಾಡೋಣ.

ದೇವರ ಜ್ಞಾನವು ಸಮಯವು ಪ್ರಾರಂಭವಾಗುವದಕ್ಕಿಂತ ಮೊದಲು ಅಸ್ತಿತ್ವದಲ್ಲಿತ್ತು ಮತ್ತು ಕ್ರೂಜಿತನಾದ "ಮಹಿಮೆಯ ಕರ್ತನಿಂದ" ಬೇರರ್ಪಡಿಸಲಾಗದ್ದು ಆಗಿತ್ತು ಎಂದು ಹೊಸೊಡಂಬಡಿಕೆಯು ತೋರಿಸುತ್ತದೆ:

> ಆದರೂ ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ. ಅದು ಇಹಲೋಕದ ಜ್ಞಾನವಲ್ಲ. ಅಳಿದು ಹೋಗುವ ಇಹಲೋಕದ ಜ್ಞಾನವೂ ಅಲ್ಲ, ಅಳಿದು ಹೋಗುವ ಇಹಲೋಕಾಧಿಕಾರಿಗಳ ಜ್ಞಾನವೂ ಅಲ್ಲ. ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವದಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದು ವರೆಗೆ ಮರೆಮಾಡಿದ ಜ್ಞಾನವೇ. ಇದನ್ನು ಇಹಲೋಕಾಧಿಕಾರಿಗಳಲ್ಲಿ ಯಾರೂ ಅರಿಯಲಿಲ್ಲ; ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ; ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ (1 ಕೊರಿಂಥ 2:6-10).

ಅಪೊಸ್ತಲಿಕ ಯುಗದವರೆಗೆ ಈ ಆಶ್ಚರ್ಯಕರವಾದ ಸತ್ಯವು ತಿಳಿದಿರಲಿಲ್ಲ, ಯಾಕಂದರೆ ಅದು ಹಿಂದಿನ ಕಾಲದಲ್ಲಿ "ಅಡಗಿಸಲ್ಪಟ್ಟ" ದೇವರಿಂದ ಪ್ರಕಟಿಸಲ್ಪಡದ "ರಹಸ್ಯ"ವಾಗಿತ್ತು. ಈ ಪ್ರಕಟಿಸಲ್ಪಟ್ಟ ರಹಸ್ಯವು ನಮಗಾಗಿ

ಅದ್ಭುತಗಳ ಕಿಟಕಿಗಳನ್ನು ತೆರೆಯುತ್ತದೆ. ಮೇಲಿನ ವಾಕ್ಯಭಾಗದಲ್ಲಿ ಸಮಯಕ್ಕಿಂದ ಮೊದಲನಿಂದ ಕ್ರಿಸ್ತನ ಕ್ರೂಜೆಯವರೆಗೆ ವಿಸ್ತರಿಸುವ ಸೇತುವೆಯನ್ನು ತೋರಿಸುತ್ತದೆ. ಈ ಸೇತುವೆಯ "ಅದ್ಭುತವಾದ ತೆರೆಯುವಿಕೆ"ಯಲ್ಲಿ ದೇವರ ಜ್ಞಾನವು ಯೇಸುವಿನಲ್ಲಿ ಸ್ಪಷ್ಟಪಡಿಸಲ್ಪಟ್ಟಿತು.

ಇದಲ್ಲದೇ, ದೇವರ ಜ್ಞಾನದಂತೆ ಯೇಸುವನ್ನು ಗುರುತಿಸುವುದರ ಬಗ್ಗೆ ಕೊಲೊಸ್ಸೆಯಲ್ಲಿಯ ಕ್ರೈಸ್ತರಿಗೆ ಪೌಲನ ಪತ್ರಿಕೆಯಲ್ಲಿ ತೋರಿಸಲ್ಪಟ್ಟಿದೆ. ಕ್ರಿಸ್ತನ ವ್ಯಕ್ತಿತ್ವ ಮತ್ತು ಕಾರ್ಯವನ್ನು ವಿಶೇಷವಾಗಿ ಸೃಷ್ಟಿಯಲ್ಲಿ ಹಾಗೂ ವಿಮೋಚನೆಯಲ್ಲಿ ಮಿತಿಗೊಳಿಸಿದ "ಜ್ಞಾನ"ವನ್ನು ಕೆಲವು ಬೋಧಕರು ಪ್ರತಿಪಾದಿಸುತ್ತಿದ್ದುದರಿಂದ ಅವರು ತೊಂದರೆಗೆ ಗುರಿಯಾಗಿದ್ದರು.[1] ಈಗ ಪ್ರಕಟಿಸಲ್ಪಟ್ಟ ದೇವರ ರಹಸ್ಯವು, "(ಕ್ರಿಸ್ತನಲ್ಲಿ) ಜ್ಞಾನವು, *ತಿಳಿವಳಿಕೆಯು* ಎಲ್ಲವೂ ಬಚ್ಚಿಡಲ್ಪಟ್ಟ ನಿಧಿಯಾಗಿದೆ" ಎಂದು ಪೌಲನು ಉತ್ತರ ಕೊಟ್ಟನು (ಕೊಲೊಸ್ಸೆ 2:3; ಒತ್ತಿ ಹೇಳಿದ್ದು ನನ್ನದು).

ಈ ರೀತಿಯಲ್ಲಿ ಪೌಲನು ಕ್ರಿಸ್ತನ ಬಗ್ಗೆ ಮಾತಾಡಿದಾಗ, ಕ್ರಿಸ್ತನು ದೇವರ ಜ್ಞಾನದ ಭಂಡಾರವಾಗಿರುವನು ಎಂದು ಹೇಳುತ್ತಿರುವದಿಲ್ಲ. ದೇವರಂತೆ, ಯೇಸುವು ಈಗ ಪೂರ್ಣಪ್ರಕಟಿಸಲ್ಪಟ್ಟ ದೇವರ ಜ್ಞಾನವಾಗಿದ್ದಾನೆ ಎಂದು ಘೋಷಿಸುತ್ತಿದ್ದಾನೆ. ಕ್ರಿಸ್ತನು ದೇವರ ಸ್ವರೂಪವೇ ಆಗಿದ್ದಾನೆಂದು ಪೌಲನು ಆಗಲೇ ತೋರಿಸಿದ್ದಾನೆ. ಇದಲ್ಲದೆ, ದೇವರ ಕುಮಾರನ ಸೃಷ್ಟಿಯ ಪೂರ್ವದ ಅಸ್ತಿತ್ವವನ್ನು ಒತ್ತಿಹೇಳಿದ್ದಾನೆ. ಬೈಬಲಿನಲ್ಲಿ ಕ್ರಿಸ್ತನ ಬಗ್ಗೆ ಉನ್ನತವಾಗಿ ವಿವರಿಸಿದ ವಾಕ್ಯಗಳಲ್ಲಿ ಒಂದಾದ ಕೊಲೊಸ್ಸೆ 1:16, 17ಎ ದಲ್ಲಿ ಅವನು ಈ ರೀತಿ ಹೇಳಿದ್ದಾನೆ:

> ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ, ದೊರೆತನಗಳಾಗಲಿ, ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು, ಸರ್ವವೂ ಆತನ ಮುಖಾಂತರವಾಗಿಯೂ ಆತನಿಗೋಸ್ಕರ ವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕಿಂತಲೂ ಮೊದಲು ಇದ್ದವನು ...

ಕೊಲೊಸ್ಸೆಯವರಿಗೆ ಬರೆದ ಪ್ರತ್ರಿಕೆಯಲ್ಲಿ ದೇವರ ಜ್ಞಾನದಂತೆ ವಿವರಿಸಲ್ಪಟ್ಟ ಕುಮಾರನು ಕೇವಲ ದೇವರ ಕುಮಾರನಗಿರುವದಿಲ್ಲ; ಆತನು ಕುಮಾರನಾದ ದೇವರು ಆಗಿರುತ್ತಾನೆ. ಹೀಗೆ "ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿವಾಸ ಮಾಡುತ್ತದೆ" (ಕೊಲೊಸ್ಸೆ 2:9). *Pleroma* ("ಪರಿಪೂರ್ಣತೆ") ಎಂಬ ಗ್ರೀಕ್ ಪದವು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ ಮೊದಲು ಕಂಡುಬರುತ್ತದೆ: "ಆತನಲ್ಲಿ [ಕ್ರಿಸ್ತನಲ್ಲಿ] ತನ್ನ ಸರ್ವ ಸಂಪೂರ್ಣತೆಯು ವಾಸವಾಗಿರುವುದು ತಂದೆಯಾದ ದೇವರ ಹಿತವಾಗಿತ್ತು" (ಕೊಲೊಸ್ಸೆ 1:19).

ದೇವರ ಮೂಲ ತಿರುಳು ಕ್ರಿಸ್ತನಲ್ಲಿ ವಾಸಿಸುತ್ತದೆ ಎಂದು ಬೇರೆ ಮಾತಿನಲ್ಲಿ ಹೇಳಬಹುದು. ದೇವರ ಮೂಲ ತಿರುಳು ಆತ್ಮವಾಗಿದೆ (ಯೋಹಾನ 4:24). ಹೊಸ ಒಡಂಬಡಿಕೆಯಲ್ಲಿ ಕೊಲೊಸ್ಸೆ 2:9ರಲ್ಲಿ ಮಾತ್ರವೇ ಗ್ರೀಕ್ *theotes* ("ದೇವತ್ವ" KJV; "ದೈವತ್ವ" NIV) ಕಂಡುಬರುತ್ತದೆ, ದೈವತ್ವದ ಪೂರ್ಣಸ್ವಭಾವವು (ತಿರುಳು) ಕ್ರಿಸ್ತನಲ್ಲಿ ಕಂಡುಬಂದಿದೆ. ಇದು ನಿಜವಾಗಿಯೂ ನಿತ್ಯವಾದ ಸಂಬಂಧವಾಗಿದ್ದು, ಕೊಲೊಸ್ಸೆಯವರ ಹಿನ್ನೆಲೆಯಲ್ಲಿ ಐತಿಹಾಸಿಕ ಯೇಸುವನ್ನು ಒಳಗೊಂಡಿರುತ್ತದೆ.[2]

## ವಿಮೋಚನೆಯಲ್ಲಿ ಪ್ರತಿಬಿಂಬಿಸಲ್ಪಟ್ಟಂತೆ

ಯೇಸುವನ್ನು ದೇವರ ಜ್ಞಾನವೆಂದು ಯೋಚಿಸುವುದು ನಮ್ಮ ಸಾಮಾನ್ಯವಾದ ಪ್ರಾರಂಭದ ಬಿಂದುವಾಗಿರುವದಿಲ್ಲ. ನಮ್ಮಲ್ಲಿ ಬಹಳ ಹೆಚ್ಚಾದವರಿಗೆ ವ್ಯಕ್ತಿತ್ವದಲ್ಲಿ ಪ್ರೀತಿ, ಕರುಣೆ ಹಾಗೂ ತಂದೆಯಾದ ದೇವರ ಕೃಪೆಯನ್ನು ಪ್ರಕಟಿಸಿದ ದೇವರ ಕುಮಾರನಂತೆ ಯೇಸುವು ಮೊದಲು ಪರಿಚಯಿಸಲ್ಪಟ್ಟನು. ನಮಗಾಗಿ ಇರುವ ದೇವರ ಪ್ರೀತಿಯು ನಮ್ಮ ವಿಮೋಚನೆಗಾಗಿ ಶಿಲುಬೆಯ ಮೇಲೆ ತನ್ನ ಕುಮಾರನನ್ನು ಆತನು ಅರ್ಪಿಸಿದಲ್ಲಿ ಪ್ರದರ್ಶಿಸಿಲ್ಪಟ್ಟಿದೆ. ಆಗ ನಾವು ನಮ್ಮನ್ನು ಯೇಸುವಿಗೆ ಸಮರ್ಪಿಸುವಂತೆ, ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಬಲದಲ್ಲಿಯ ವಿಶ್ವಾಸದ ಮುಖಾಂತರ ಆತನೊಂದಿಗೆ ನಾವು ಎಬ್ಬಿಸಲ್ಪಡುತ್ತೇವೆ, ಇದು ಶುಭವಾರ್ತೆ, ಕ್ರಿಸ್ತನ ಸುವಾರ್ತೆ ಆಗಿತ್ತು. ಕ್ರಿಸ್ತನನ್ನು ಕುರಿತು ನಾವು ಮುಂದೆ ನೋಡುವಂತೆ ಆತನು ದೇವರ ಪ್ರೀತಿ, ದಯೆ ಮತ್ತು ಕೃಪೆಗಳಿಗಿಂತ - ಹೆಚ್ಚಾದದ್ದನ್ನು ತೋರಿಸುತ್ತಾನೆಂದು ನಾವು ಕಂಡು ಕೊಳ್ಳುತ್ತೇವೆ. ಆತನು ನಮಗೆ ಸ್ಪಷ್ಟಪಡಿಸಲ್ಪಟ್ಟ ದೇವರ ಜ್ಞಾನವೂ ಸಹ ಆಗಿರುತ್ತಾನೆ.

ಪೌಲನು ಕೊರಿಂಥದವರಿಗೆ ಬರೆದಾಗ ಅನೇಕರು ಸರಿಯಾದ ಸ್ಥಳದಲ್ಲಿ ಹುಡುಕದೇ ಇದ್ದುದರಿಂದ ಅವರಿಗೆ ದೇವರ ಜ್ಞಾನವು ಸ್ಪಷ್ಟವಾಗಿರುವದಿಲ್ಲವೆಂದು ಅವನು ನೆನಪಿಗೆ ತಂದನು. ಯೆಹೂದ್ಯರು ಸೂಚಕ ಕಾರ್ಯಗಳಿಂದ ಮರುಳು ಗೊಳಿಸಲ್ಪಟ್ಟಿದ್ದರು. ಅವರು ಅದ್ಭುತ ಕಾರ್ಯಗಳನ್ನು ನೋಡಲು ಬಯಸಿದರು (ಮತ್ತಾಯ 12:38, 39). ಗ್ರೀಕರು ಜ್ಞಾನವನ್ನು ಹುಡುಕುತ್ತಿದ್ದರು. ಪೌಲನು ಅದನ್ನು "ಲೋಕದ ಜ್ಞಾನ" ಎಂದು ವಿವರಿಸಿದನು. ಈ ಹಿನ್ನೆಲೆಯಲ್ಲಿ ಪೌಲನು, "ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ ... ಈತನು ದೇವರ ಶಕ್ತಿಯೂ ದೇವರ ಜ್ಞಾನವೂ ಆಗಿದ್ದಾನೆ" (1 ಕೊರಿಂಥ 1:23, 24; ಒತ್ತಿ ಹೇಳಿದ್ದು ನನ್ನದು) ಎಂದು ಪೌಲನು ಹೇಳಿದನು. ಹೀಗೆ ನಮಗಾಗಿರುವ ರಕ್ಷಣೆಯ ದೇವರ ಯೋಜನೆಯ ಮುಖಾಂತರವಾಗಿ ಕ್ರಿಸ್ತನು "ನಮಗೆ ದೇವರ ಕಡೆಯಿಂದ *ಜ್ಞಾನವೂ*, ನೀತಿ, ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ" ಆದನು (1 ಕೊರಿಂಥ 1:30ಬಿ), ಆದುದರಿಂದ ಆತನ ವಿಮೋಚನಾ ಕಾರ್ಯದಲ್ಲಿ ಕುಮಾರನು ತಂದೆಯ ಜ್ಞಾನವನ್ನು ಪ್ರತಿಬಿಂಬಿಸುತ್ತಾನೆ.

## ಸೃಷ್ಟಿಯಲ್ಲಿ ಪ್ರದರ್ಶಿಸಲ್ಪಟ್ಟಂತೆ

ದೇವರು ಸರ್ವಜ್ಞಾನಿಯೂ ಎಲ್ಲವನ್ನು ತಿಳಿದವನೂ ಆಗಿದ್ದುದರಿಂದ ಆತನು ಎಂದೂ ಹುಚ್ಚು ಕಾರ್ಯವನ್ನು ಮಾಡಿರುವದಿಲ್ಲ ಇಲ್ಲವೇ ಹುಚ್ಚು ಮಾತನ್ನು ಹೇಳಿರುವದಿಲ್ಲ. ಸರ್ವಶಕ್ತನಾಗಿರುವುದು ಆತನ ಸ್ವಭಾವವಾಗಿದ್ದಂತೆಯೇ ಸರ್ವಜ್ಞಾನಿಯಾಗಿರುವುದೂ ಆತನ ಸ್ವಭಾವವಾಗಿದೆ. ಆದುದರಿಂದ ಆತನ ಕುಮಾರನಾದ ಯೇಸುವಿನಲ್ಲಿ ದೇವರ ಜ್ಞಾನವನ್ನು ನೋಡುವುದು ನಮ್ಮನ್ನು ಆಶ್ಚರ್ಯಗೊಳಿಸಬಾರದು. ಆತನು ದೇವರ ಜ್ಞಾನದ ಕಾಣಿಸಿಕೊಳ್ಳುವಿಕೆ (ಪ್ರಕಟನೆ) ಆಗಿದ್ದಾನೆ. ಆ ಜ್ಞಾನವು ನಿತ್ಯತ್ವದಲ್ಲಿ, ಸೃಷ್ಟಿಯಲ್ಲಿ ಆತನೊಂದಿಗೆ ಇತ್ತು ಹಾಗೂ ಈಗ ಚರಿತ್ರೆಯಲ್ಲಿ ಪ್ರಕಟಿಸಲ್ಪಟ್ಟಿದೆ.

ಯೇಸುವಿನಲ್ಲಿ ದೇವರ ಜ್ಞಾನವು "ನಿಕಟವಾಗಿರುವದನ್ನು" ನಾವು ಗಮನಿಸಿದಂತೆ, ಸೃಷ್ಟಿಯ ಘನಕರವಾದ "ಬಹಳ ಹಿಂದಿನ" ಘಟನೆಯನ್ನು ನೋಡೋಣ, ಜ್ಞಾನವು ಅಲ್ಲಿ ಇತ್ತು, ಅದು ನಮ್ಮನ್ನು ಆಶ್ಚರ್ಯಗೊಳಿಸುವುದೋ? ನಿಶ್ಚಯವಾಗಿಯೂ ಇಲ್ಲ, ದೇವರ ಸ್ವಭಾವದ (ಸರ್ವಜ್ಞಾನಿಯಾಗಿ ಇರುವಂಥದ್ದು) ದೃಷ್ಟಿಕೋನದಲ್ಲಿ ಹಾಗೂ

ಯೇಸುವಿನಲ್ಲಿ ದೇವರ ಜ್ಞಾನದ ಅನಂತರದ ಪ್ರಕಟನೆಗಳು (ಹೊಸ ಒಡಂಬಡಿಕೆ) ಬೆಳಕಿನಲ್ಲಿ ಸೃಷ್ಟಿಗಿಂತ ಮೊದಲು ಜ್ಞಾನವನ್ನು ನಾವು ಕಂಡು ಕೊಳ್ಳದಿದ್ದರೆ ನಾವು ಬೆರಗುಗೊಳ್ಳುತ್ತೇವೆ.

ಹೊಸ ಒಡಂಬಡಿಕೆಯ ಬೋಧನೆಗಳು ಯೇಸುವನ್ನು ದೇವರ ಜ್ಞಾನದೊಂದಿಗೆ ಸಂಬಂಧಿಸುತ್ತವೆ. ಅಲ್ಲಿ ಕಂಡು ಬರುವ ಸತ್ಯಗಳು ದೇವರ ಜ್ಞಾನವು ನಿತ್ಯವಾದದ್ದೂ ಸೃಷ್ಟಿಯಲ್ಲಿ ಕಾರ್ಯನಿರತವಾದದ್ದೂ ಎಂಬದನ್ನು ತೋರಿಸುತ್ತವೆ. ಹೊಸ ಒಡಂಬಡಿಕೆಯ ಬರಹಗಾರರ ದೃಷ್ಟಿಕೋನದಿಂದ ದೇವರ ಸೃಷ್ಟಿಯಲ್ಲಿ ಕುಮಾರನಾದ ದೇವರು ಕಾರ್ಯನಿರತನಾಗಿದ್ದುದನ್ನು ಕಂಡು ಕೊಳ್ಳುತ್ತೇವೆ, ಪರಿಶುದ್ಧಾತ್ಮನಿಂದ ಅಂಥ ಆಳವಾದ ಒಳನೋಟವು ಕೊಡಲ್ಪಟ್ಟ ಜನರ ಕಣ್ಣುಗಳ ಮುಖಾಂತರ ನೋಡುವದಕ್ಕೆ ನಾವೆಷ್ಟು ಧನ್ಯರಾಗಿದ್ದೇವೆ. ಅವರ ಮುಖಾಂತರವಾಗಿ ಪ್ರವಾದಿಗಳೂ ದೇವದೂತರೂ ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವ ಸತ್ಯಗಳನ್ನು ನಾವು ನೋಡುತ್ತೇವೆ (1 ಪೇತ್ರ 1:10-12; 2 ಪೇತ್ರ 1:19-21). ಇದರ ಅರ್ಥ ದೇವರು "ಪ್ರಗತಿಪರ ಪ್ರವಾದನೆಯನ್ನು" ರೂಢಿಸಿದನು ಎಂದಾಗುವುದೋ? ಹೌದು. ಅದು ಹಾಗೆಯೆಯಿದೆ! ಬೈಬಲಿನ ಭಾಷೆಯ ಅರ್ಥವು ಹಾಗೇನಾದರೂ ಆಗಿದ್ದರೆ ಹಳೇ ಒಡಂಬಡಿಕೆಯಲ್ಲಿಗಿಂತ ಹೆಚ್ಚಾಗಿ ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಪೂರ್ಣವಾಗಿ ದೇವರನ್ನು ನೋಡುತ್ತೇವೆ. ದೇವರ ಪ್ರಗತಿಪರ ಪ್ರಕಟಣೆ ಹಾಗೂ ನಮಗಾಗಿ ಆತನ ಚಿತ್ತವು ಪರಿಶುದ್ಧ ಬರಹಗಳಲ್ಲಿ ಕಂಡು ಬರುತ್ತದೆ. ಇದು ಎರಡೂ ಒಡಂಬಡಿಕೆಗಳಲ್ಲಿ ಒಪ್ಪಿಕೊಳ್ಳಲ್ಪಟ್ಟಿದೆ (ಧರ್ಮೋಪದೇಶಕಾಂಡ 4:2; 12:32; ಜ್ಞಾನೋಕ್ತಿ 30:5, 6; ಪ್ರಕಟನೆ 22:18, 19). ತನ್ನ ಪ್ರಕಟನೆ ಮತ್ತು ತನ್ನ ವಾಕ್ಯದ ಬಗ್ಗೆ ದೇವರು ಕಾಳಜಿ ವಹಿಸಿರುವ ಉದಾಹರಣೆಗಳು ಪದೇ ಪದೇ ಕಂಡು ಬರುತ್ತವೆ.

ಹೊಸ ಒಡಂಬಡಿಕೆಯ ದೈವಪ್ರೇರಿತ ಬರಹಗಾರರ ಬರಹಗಳ ಮುಖಾಂತರವಾಗಿ ಜ್ಞಾನೋಕ್ತಿ 8:22-31ರಲ್ಲಿ ಬರಹಗಾರರು ನೋಡಿದ್ದಕ್ಕಿಂತಲೂ ಹೆಚ್ಚಾದದ್ದನ್ನು ನಾವು ನೋಡಬಹುದು. ಸೃಷ್ಟಿಯಲ್ಲಿ ಮಹಿಮೆಯಿಂದಲೂ ಆನಂದದಿಂದಲೂ ಪ್ರಕಟಿಸಲ್ಪಟ್ಟ ದೇವರ ಗುಣಲಕ್ಷಣದಂತೆ ಜ್ಞಾನವನ್ನು ಅವನು ನೋಡಿದನು. ಜ್ಞಾನೋಕ್ತಿಗಳ ವಾಕ್ಯಗಳಲ್ಲಿ ನಾವು ಸಹ ಅದನ್ನು ಗಮನಿಸಬಹುದು. ಅನಂತರದ ಹೊಸ ಒಡಂಬಡಿಕೆಯ ಲಾಭದಿಂದ, ವ್ಯಕ್ತಿಯಂತೆ ಪ್ರಕಟಿಸಲ್ಪಟ್ಟ ದೇವರ ಸ್ವಭಾವದಂತೆ (ತಿರುಳಿನಂತೆ) ಜ್ಞಾನವನ್ನು ನಾವು ಸಹ ನೋಡಬಹುದು - ಕೇವಲ ಜ್ಞಾನವೆಂಬ ಅಮೂರ್ತವಾದ ಭಾವನೆಯನ್ನು ಪದ್ಯರೂಪದ ವ್ಯಕ್ತಿಯಂತೆ ವಿವರಿಸಲ್ಪಟ್ಟದ್ದಾಗಿರುವದಿಲ್ಲ. ಕುಮಾರನಾದ ದೇವರು ಸೃಷ್ಟಿಯಲ್ಲಿ ದೇವರ ಜ್ಞಾನವನ್ನು ಪ್ರತಿಬಿಂಬಿಸಿರುವದನ್ನು ನಾವು ನೋಡುತ್ತೇವೆ ಎಂದು ಬೇರೆ ಮಾತಿನಲ್ಲಿ ಹೇಳಬಹುದು, ಒಬ್ಬ ಗ್ರಂಥ ಕರ್ತನು ಹೀಗೆ ಹೇಳಿದ್ದಾನೆ,

> ... ಜ್ಞಾನದ ಮೂಲಗಳು ಮತ್ತು ಅಧಿಕಾರವು ಸೃಷ್ಟಿಯ ವ್ಯಕ್ತೀಕೃತ ಕ್ರಮಕ್ಕಿಂತ ಹೆಚ್ಚಿನದನ್ನು ಸೂಚಿಸುತ್ತದೆ. ಜ್ಞಾನವು ಹೇಗೋ ಕರ್ತನೊಂದಿಗೆ ಹೋಲಿಸಲ್ಪಟ್ಟಿದೆ. Lady Wisdomದ ಕರೆಯುವಿಕೆಯು ಕರ್ತನ ಧ್ವನಿಯಾಗಿದೆ; ಆಕೆ ದೇವರ ಪ್ರಕಟಣೆಯಾಗಿದ್ದಾಳೆ, ಆದರೆ ಕೇವಲ ಸೃಷ್ಟಿಯ ಸ್ವಯಂ - ಪ್ರಕಟಣೆಯಾಗಿಲ್ಲ.[3]

ದೇವರ ಜ್ಞಾನದಂತೆ ಕ್ರಿಸ್ತನು ಜಗತ್ತಿನ ಸೃಷ್ಟಿಯಲ್ಲಿ ಹಾಗೂ ವಿಮೋಚನೆಯಲ್ಲಿ

ಪ್ರತಿಬಿಂಬಿಸುತ್ತಾನೆ. ಈ ಸಂಬಂಧಗಳು ಬೈಬಲಿನಲ್ಲಿ ಇರುತ್ತವೆ. ಅವುಗಳಿಂದ ನಾವು ಲಾಭ ಪಡೆಯಬಹುದು. ಕ್ರಿಸ್ತನು ದೇವರ ಜ್ಞಾನವಾಗಿದ್ದಾನೆ ಎಂದು ಕ್ರೈಸ್ತರು ತೀರ್ಮಾನಿಸಬಹುದು - ಹಾಗೂ ಪೌಲನು ಹಾಗೆಯೇ ತೀರ್ಮಾನಿಸಿದನು (1 ಕೊರಿಂಥ 1:24).

---

ಟಿಪ್ಪಣಿಗಳು

[1]Everett Ferguson, *Backgrounds of Early Christianity* (Grand Rapids, Mich.: Wm. B. Eerdmans Publishing Co., 1987), 245-49. [2]ಕೊಲೊಸ್ಸೆ 1:20. ನೋಡಿರಿ Gerhard Delling, "*pleroma*," in *Theological Dictionary of the New Testament*, ed. Gerhard Friedrich, trans. and ed. Geoffrey W. Bromiley (Grand Rapids, Mich., Wm. B. Eerdmans Publishing Co., 1968), 6:302-5. [3]Roland E. Murphy, *The Tree of Life*, The Anchor Bible Reference Library, gen. ed. David Noel Freedman (New York: Doubleday, 1990), 138, 147.

© 2009 Truth for Today